VIDYAVARDHAKA LAW COLLEGE LIBRARY MYSURU

0102/0324

# I Semester 3 Year LL.B./III Semester 5 Year B.A. LL.B./B.B.A. LL.B. Examination, December 2014
# CONSTITUTION

Duration : 3 Hours

Max. Marks : 100

**Instructions** : 1. Answer Q. No. **9** and **any five** of the **remaining** questions.

2. Q. No. **9** carries **20** marks and the **remaining** questions carry **16** marks **each**.

3. Answers should be written **either** in **English** or **Kannada** **completely**.

**ಸೂಚನೆಗಳು** : 1. ಪ್ರಶ್ನೆ **9** ಮತ್ತು ಉಳಿದ ಯಾವುದಾದರೂ ಐದಕ್ಕೆ ಉತ್ತರಿಸಿರಿ.

2. ಪ್ರಶ್ನೆ **9** ಕ್ಕೆ **20** ಅಂಕಗಳಿದ್ದು ಉಳಿದವುಗಳಿಗೆ **16** ಅಂಕಗಳಿವೆ.

3. ಪ್ರಶ್ನೆಗಳಿಗೆ ಉತ್ತರವನ್ನು ಸಂಪೂರ್ಣವಾಗಿ **ಕನ್ನಡ** ಅಥವಾ **ಇಂಗ್ಲೀಷ್‌ನಲ್ಲಿ** ಬರೆಯಬೇಕು.

Q. No. 1. Discuss the rights of minorities to establish and manage the educational institutions. Marks : 16

ಅಲ್ಪ ಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳನ್ನು ನಿರ್ವಹಿಸುವ ಹಕ್ಕನ್ನು ಚರ್ಚಿಸಿ.

Q. No. 2. Explain the concept of equality as enshrined under Article 14 of the Constitution. Marks : 16

ಸಂವಿಧಾನದ ಅನುಚ್ಛೇದ 14 ರ ಪ್ರಕಾರ ಸಮಾನತೆಯ ಸಿದ್ಧಾಂತವನ್ನು ವಿವರಿಸಿರಿ.

Q. No. 3. Explain the powers of the President. Marks : 16

ರಾಷ್ಟ್ರಾಧ್ಯಕ್ಷರ ವಿವಿಧ ಅಧಿಕಾರಗಳನ್ನು ವಿವರಿಸಿರಿ.

Q. No. 4. Explain the various kinds of emergencies contemplated under the Constitution. Marks : 16

ಸಂವಿಧಾನದಲ್ಲಿ ವಿವರಿಸಲಾದ ವಿವಿಧ ರೀತಿಯ ತುರ್ತು ಪರಿಸ್ಥಿತಿಗಳನ್ನು ವಿವರಿಸಿರಿ.

Q. No. 5. Explain the procedure to amend the Indian Constitution and write a note on doctrine of basic structure. Marks : 16

ಭಾರತೀಯ ಸಂವಿಧಾನವನ್ನು ತಿದ್ದುಪಡಿ ಮಾಡಲು ಇರುವ ಪ್ರಕ್ರಿಯೆಯನ್ನು ವಿವರಿಸಿರಿ ಮತ್ತು ಮೂಲಭೂತ ಲಕ್ಷಣಗಳ ಸಿದ್ಧಾಂತದ ಬಗ್ಗೆ ಟಿಪ್ಪಣಿ ಬರೆಯಿರಿ.

Q. No. 6. Explain with relevent cases the various types of writs contemplated under the Constitution of India. Marks : 16

ಭಾರತದ ಸಂವಿಧಾನದಲ್ಲಿ ನೀಡಲಾಗಿರುವ ವಿವಿಧ ರೀತಿಯ ರಿಟ್‌ಗಳನ್ನು ಸೂಕ್ತ ಪ್ರಕರಣಗಳೊಂದಿಗೆ ನಿರೂಪಿಸಿರಿ.

Q. No. 7. 'Freedom of trade, commerce and intercourse throughout the territory of India shall be free'–Discuss. Marks : 16

'ವ್ಯಾಪಾರ, ವಾಣಿಜ್ಯ ಸ್ವಾತಂತ್ರ್ಯ ರಾಷ್ಟ್ರದ್ಯಾಂತ ಉದಾರವಾಗಿರುತ್ತದೆ'–ಚರ್ಚಿಸಿ.

Q. No. 8. Write short notes on **any two** of the following : Marks : 2×8=16

ಯಾವುದಾದರೂ ಎರಡರ ಬಗ್ಗೆ ಟಿಪ್ಪಣಿ ಬರೆಯಿರಿ:

a) Doctrine of Eclipse.
ಗ್ರಹಣ ಸಿದ್ಧಾಂತ.

b) Fundamental Duties.
ಮೂಲಭೂತ ಕರ್ತವ್ಯಗಳು.

c) Public Interest Litigation.
ಸಾರ್ವಜನಿಕ ಹಿತಾಸಕ್ತಿ ದಾವೆ.

Q. No. 9. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಪರಿಹಾರ ನೀಡಿ.

a) Haryana Panchayat Raj Act, 1994, provided that a person having more than two children is not eligible to contest election for the post of Sarpanch or Panch in Gram Panchayats. However, this provision is not applicable to other institutions of local governance or for those contesting to the State Legislature. This was challenged by one Mr. Javed as discriminatory and violative of Article 14 of the Constitution.

Decide. Marks : 10

ಹರ್ಯಾಣ ಪಂಚಾಯತ್ ರಾಜ್ ಕಾಯ್ದೆ, 1994 ರ ಅನುಸಾರ ಎರಡು ಮಕ್ಕಳಿಗಿಂತ ಹೆಚ್ಚಿರುವ ಯಾವುದೇ ವ್ಯಕ್ತಿಗಳಿಗೆ ಗ್ರಾಮ ಪಂಚಾಯತ್‌ನ ಪಂಚ ಯಾ ಸರಪಂಚನಾಗಿ ಸ್ಪರ್ಧಿಸುವುದನ್ನು ನಿಷೇಧಿಸಲಾಗಿದೆ. ಪ್ರಸುತ್ತ ಕಾನೂನಿನ ಈ ನಿಯಮವು ಇತರೇ ಪಂಚಾಯತ್ ಸಂಸ್ಥೆಗಳಿಗಾಗಲಿ ಅಥವಾ ವಿಧಾನಸಭಾ ಸದಸ್ಯರಿಗಾಗಲಿ ಅನ್ವಯವಾಗುವುದಿಲ್ಲ. ಈ ಕಾಯ್ದೆಯು ಸಂವಿಧಾನದ ಅನುಚ್ಛೇದ 14 ರ ಅನ್ವಯ ತಾರತಮ್ಯ ಮಾಡುತ್ತಿರುವುದು ಎಂದು ಸದ್ರಿ ಕಾಯ್ದೆಯನ್ನು ಶ್ರೀ ಜಾವೇದರು ಪ್ರಶ್ನಿಸಿರುವರು. ನಿರ್ಣಯಿಸಿ.

b) Srikanth is working as the first division clerk at RTO Bangalore. An allegation was made that he had misappropriated lots of money in the department. After departmental inquiry he was removed from the service. In the meantime a criminal prosecution was intiated against him under the Prevention of Corruption Act. In the trial Srikanth pleaded that removal from the job is the first punishment and the criminal prosecution amounts for double jeopardy. Decide. Marks : 10

ಶ್ರೀಕಾಂತ ಎಂಬವರು ಬೆಂಗಳೂರಿನ ಆರ್.ಟಿ. ಓ ದಲ್ಲಿ ಪ್ರಥಮ ದರ್ಜೆ ಗುಮಾಸ್ತರಾಗಿದ್ದು ತಮ್ಮ ವಿಭಾಗದಲ್ಲಿ ಹಣಕಾಸನ್ನು ದುರುಪಯೋಗ ಮಾಡಿದ ಅಪಾದನೆಗೆ ಒಳಗಾಗುತ್ತಾರೆ. ತದನಂತರ ಇಲಾಖಾ ವಿಚಾರಣೆಯಲ್ಲಿ ಇದು ಸತ್ಯವೆಂದು ಕಂಡು ಬಂದು ಅವರನ್ನು ಸೇವೆಯಿಂದ ವಜಾ ಮಾಡಲಾಯಿತು. ಈ ನಡುವೆ ಅವರ ಮೇಲೆ ಭ್ರಷ್ಟಾಚಾರ ತಡೆ ಕಾನೂನಿನ್ವಯ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಯಿತು. ಪ್ರಕರಣ ನಡೆಯುತ್ತಿರುವಾಗ ಶ್ರೀಕಾಂತರು ತನ್ನನ್ನು ಸೇವೆಯಿಂದ ವಜಾಮಾಡಿದ್ದು ಪ್ರಥಮ ಶಿಕ್ಷೆಯಾಗಿದ್ದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುವುದರಿಂದ ಅದು ಒಂದೇ ತಪ್ಪಿಗೆ ಎರಡು ಶಿಕ್ಷೆ ನೀಡುವಂತಹುದಾಗಿದೆ ಎಂದು ವಾದ ಮಾಡುತ್ತಾರೆ. ನಿರ್ಣಯಿಸಿ.

c) Bhavani Rao was selected as the Prime Ministirial candidate by PPP Party after the General Elections of 1991. Bhavani Rao's PPP had won only 251 seats in Lok Sabha and falls short of simple majority. PPP negotiated behind the screen with the members of LMM Party who had the strength of 17 members in Lok Sabha promising each of LMM members money of ₹ 1 crore for casting vote in favour of PPP during the process of proving majority. According PPP won confidence vote in the Parliament. A NGO 'Aradhana'suspecting foul play fielda case with CBI and the matter came before the Supreme Court. PPP contended before the court privileges under Article 105. Decide. Marks : 10

1991 ರ ಲೋಕಸಭಾ ಚುನಾವಣೆಯಲ್ಲಿ ಶ್ರೀಯುತ ಭವಾನಿ ರಾವ್ ಅವರ ಪಿ.ಪಿ.ಪಿ. ಪಕ್ಷವು 251 ಸೀಟುಗಳ ನೆಲೆಯಲ್ಲಿ ಅತ್ಯಂತ ದೊಡ್ಡ ಪಕ್ಷವೆಂದು ಹೊರಹೊಮ್ಮಿದ್ದು ಶ್ರೀಯುತ ಭವಾನಿ ರಾವ್‌ರವರನ್ನು ಪ್ರಧಾನಮಂತ್ರಿ ಎಂದು ಆಯ್ಕೆ ಮಾಡಲಾಯಿತು. ಪಿ.ಪಿ.ಪಿ. ಪಕ್ಷಕ್ಕೆ ಲೋಕಸಭೆಯಲ್ಲಿ ಸರಳ ಬಹುಮತ ನಿರೂಪಿಸಲು ಕಷ್ಟವಿತ್ತು. ಇಂತಹ ಸಂದರ್ಭದಲ್ಲಿ ಎಲ್.ಎಮ್.ಎಮ್. ಪಕ್ಷದ 17 ಸದಸ್ಯರು ಲೋಕಸಭೆಗೆ ಆಯ್ಕೆಯಾಗಿತ್ತು. ಈ ಪಕ್ಷ ಹಾಗೂ ಪಿ.ಪಿ.ಪಿ. ನಡುವೆ ತೆರೆಮರೆಯ ಮಾತುಕತೆ ನಡೆದು ಬಹುಮತದ ಸಂದರ್ಭದಲ್ಲಿ ಎಲ್.ಎಮ್.ಎಮ್. ಪಕ್ಷವು ಪಿ.ಪಿ.ಪಿ.ಗೆ ಸಹಾಯ ಮಾಡಿದ್ದಲ್ಲಿ ಎಲ್.ಎಮ್.ಎಮ್. ಪಕ್ಷದ ಪ್ರತಿಯೋರ್ವ ಲೋಕಸಭಾ ಸದಸ್ಯನಿಗೂ ರೂ. ಒಂದು ಕೋಟಿಯನ್ನು ನೀಡುವುದಾಗಿ ಪಿ.ಪಿ.ಪಿ. ಆಶ್ವಾಸನೆ ನೀಡಿತು. ತದನಂತರ ಪಿ.ಪಿ.ಪಿ., ಎಲ್.ಎಮ್.ಎಮ್. ಪಕ್ಷದ ನೆರವಿನಿಂದ ಬಹುಮತವನ್ನು ಗಳಿಸಿತು. ಸರ್ಕಾರೇತರ ಸಂಸ್ಥೆಯಾದ 'ಆರಾಧನ' ಈ ವಿಷಯದಲ್ಲಿ ಅನುಮಾನಗೊಂಡು ಸಿಬಿಐಗೆ ದೂರು ನೀಡಿತ್ತು. ಈ ಪ್ರಕರಣ ಈಗ ಸರ್ವೋಚ್ಛ ನ್ಯಾಯಾಲಯಕ್ಕೆ ಬಂದಿದ್ದು ಪಿ.ಪಿ.ಪಿ. ಪಕ್ಷವು ಸಂವಿಧಾನದ 105 ನೇ ಅನುಚ್ಛೇದಂತೆ ಉನ್ಮುಕ್ತಿಗಳನ್ನು ಕೇಳುತ್ತಿದೆ. ನಿರ್ಣಯಿಸಿ.

---